## ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 988/2022

ಫ್ರಾಸಾ : 05
ಚಾಸಾ : 06

| | | |
|---|---|---|
| ಹೆಸರು | : | ಇಬ್ರಾಹಿಂ ಖಲೀಲ್ |
| ತಂದೆಯ ಹೆಸರು | : | ಕೆ ಮೊಹಮ್ಮದ್ ಶಾಪಿ |
| ಪ್ರಾಯ | : | 32 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಕಲ್ಲಡ್ಕ ಗ್ರಾಮ |

---

ದಿಃ 14/03/2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

---

### ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ನಿಪಿ-17 ಮತ್ತು 18 ರಲ್ಲಿರುವ ಸಹಿಗಳನ್ನು ತನ್ನದೆಂದು ನೋಡಿ ಗುರುತಿಸಿದ ಮೇರೆಗೆ ಅದರಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-17(ಬಿ ) ಮತ್ತು ನಿಪಿ-18(ಬಿ ) ಎಂದು ಗುರುತಿಸಲಾಯಿತು . ಸುಮಾರು ವರ್ಷಗಳ ಹಿಂದೆ ಸದರಿ ದಾಖಲೆಗೆ ಠಾಣೆಯಲ್ಲಿ ಸಹಿ ಹಾಕಿರತ್ತೇನೆ. ಅವುಗಳಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ . ಪೋಲಿಸರು ಮಹಜರ ಮಾಡಿ ಯಾವುದೇ ವಾಹನಗಳನ್ನು ನನ್ನ ಸಮಕ್ಷಮ ಸ್ವಾದೀನಪಡಿಸಿಕೊಂಡಿರುವುದಿಲ್ಲ . ಪೋಟೋದಲ್ಲಿ ಕಾಣುವ ವಾಹನಗಳನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ .

(ಈ ಹಂತದಲ್ಲಿ ಮಾನ್ಯ ಎ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಎಪಿಪಿಯವರಿಂದಃ</u> -

2. ದಿಃ 08.06.2022 ರಂದು ಪೋಲಿಸರು ಬಂದಿದ್ದಾಗ ಪ್ರಕರಣದ ಪ್ರತ್ಯಕ್ಷದರ್ಶಿ ಚಾಸಾ-4 ರವರು ಹಾಜರಿದ್ದು ಅಪಘಾತ ಸ್ಥಳವನ್ನು ತೋರಿಸಿಕೊಟ್ಟಂತೆ ಅಪಘಾತಕ್ಕೊಳಗಾದ ಟೆಂಪೂ ಮತ್ತು ಕಾರನ್ನು ಸ್ವಾದೀನಪಡಿಸಿಕೊಂಡು ಸಂಜೆ 4.00 ಗಂಟೆಯಿಂದ 5.00 ಗಂಟೆವರೆಗೆ ಜರುಗಿಸಿ ನಿಪಿ-17 ಮತ್ತು ನಿಪಿ-18 ಕ್ಕೆ ಪಂಚರಾಗಿ ಚಾಸಾ-4,5 ಮತ್ತು ನಾನು ಸಹಿ ಹಾಕಿರುತ್ತೇವೆ ಎಂದರೆ ಸರಿಯಲ್ಲ . ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ವಕೀಲರಿಂದಃಇರುವುದಿಲ್ಲ</u>

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ